KAN 401.3 Reg. No. ..................................

ಕ್ರೆಡಿಟ್ ಆಧಾರಿತ ನಾಲ್ಕನೆ ಸೆಮಿಸ್ಟರ್ ಬಿ.ಕಾಂ. ಪದವಿ ಪರೀಕ್ಷೆ ಏಪ್ರಿಲ್ 2012

ಕನ್ನಡ ಭಾಷಾ ಪತ್ರಿಕೆ

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

I. ಅ) ಒಂದು ಪದ್ಯಭಾಗವನ್ನು ಸಂದರ್ಭಸಹಿತ ವಿವರಿಸಿ. 1x5=5

1) ಆಸೆಯೆಂಬುದು ಅರಸಿಂಗಲ್ಲದೆ
ಶಿವಭಕ್ತರಿಗೆ ಉಂಟೆ ಅಯ್ಯಾ?
ರೋಷವೆಂಬುದು ಯಮದೂತರಿಗಲ್ಲದೆ
ಅಜಾತರಿಗುಂಟೆ ಅಯ್ಯಾ?
ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ
ಮಾರಯ್ಯಪ್ರಿಯ ಅಮಲೇಶ್ವರ ಲಿಂಗಕ್ಕೆ ದೂರವಾರಯ್ಯ

ಅಥವಾ

2) ಅನ್ನದಾತುರಕಿಂತ ಚಿನ್ನದಾತುರ ತೀಕ್ಷ್ಣ
ಚಿನ್ನದಾತುರಕಿಂತ ಹೆಣ್ಣುಗಂಡೊಲವು
ಮನ್ನಣೆಯ ದಾಹವೀಯೆಲ್ಲಂ ತೀಕ್ಷ್ಣತಮ
ತಿನ್ನುವುದದಾತ್ಮವನೆ ಮಂಕುತಿಮ್ಮ

ಆ) ಎರಡು ಸಾಲುಗಳಿಗೆ ಸಂದರ್ಭ ಸಹಿತ ವಿವರಣೆ ನೀಡಿ. 2×3=6

1) ನೀನೆತ್ತಿಕೊಂಡ ಛಲಮನೆ ಮೆರೆಯಾ

2) ಎಲ್ಲ ಮರಗಳ ಹಿಂದೆ ತಾಯಿಯ ರೂಪ ಹೊಳೆದಂತಾಯಿತು

3) ಬೇಗುದಿಗೊಂಬೆಯ ಬದುಕಿನ ಬವಣೆಗೆ ಮಾಗಿಲ್ಲವೇ ಬಾಳ ಗಾಯ?

ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. 1x10=10

1) ಅಭಿಮನ್ಯು ಮತ್ತು ಮಗ ಲಕ್ಷಣ ಇವರ ಶವವನ್ನು ನೋಡುತ್ತಲೇ ಕೌರವನ ಮನಸಿನಲ್ಲಿ ಮೂಡಿದ ಭಾವನೆಗಳೇನು? ವಿವರಿಸಿ.

2) ಕೇಡು ಬಯಸಿದವರಿಗೆ ಕೇಡೇ ಉಂಟಾಗುತ್ತದೆ ಎಂಬ ಆಶಯ 'ನಾಗಿ' ಕವಿತೆಯಲ್ಲಿ ಹೇಗೆ ವ್ಯಕ್ತವಾಗಿದೆ? ವಿವರಿಸಿ.

ಈ) ಒಂದು ಪ್ರಶ್ನೆಗೆ ಸಂಕ್ಷೇಪವಾಗಿ ಉತ್ತರಿಸಿ. 1x7=7

1) ವಚನಕಾರರ ದೃಷ್ಟಿಯಲ್ಲಿ ಕಾಯಕದ ಮಹತ್ತ್ವವು ಹೇಗೆ ವಿವರಿಸಲ್ಪಟ್ಟಿದೆ?

2) ನಾಗಿಯ ಹೃದಯ ಭಗವಂತನಿಗಾಗಿ ಮಿಡಿದ ಬಗೆಯನ್ನು 'ವಿಶ್ವಕುಟುಂಬಿಯ ಕಷ್ಟ' ಕವನದ ಹಿನ್ನೆಲೆಯಲ್ಲಿ ವಿಮರ್ಶಿಸಿರಿ.

II. ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. 1x10=10

1) ಧರ್ಮಗಳಿರಬೇಕಾದ ಸಾಮಾಜಿಕ ಜವಾಬ್ದಾರಿಗಳ ಕುರಿತು ಜಿ.ಎಸ್.ಶಿವರುದ್ರಪ್ಪ ಅವರ ಅಭಿಪ್ರಾಯಗಳನ್ನು ವಿಮರ್ಶಿಸಿ

2) ಓತಿಕ್ಯಾತನ ಕಾಟಕ್ಕೆ ಬಲಿಯಾದ ಪ್ಯಾರನನ್ನು ತೇಜಸ್ವಿಯವರು ಹೇಗೆ ಚಿತ್ರಿಸಿದ್ದಾರೆ? ವಿವರಿಸಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. 1x7=7

1) ಧರ್ಮದ ಸ್ವರೂಪವನ್ನು ಕುರಿತು ಲೇಖಕರ ಅಭಿಪ್ರಾಯಗಳನ್ನು ವಿವರಿಸಿ.

2) 'ನೀರಿನ ಮಿತ ಬಳಕೆ' – ಕುರಿತು ಪ್ರಬಂಧ ಬರೆಯಿರಿ.

III. ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ. **1x10=10**

1) 'ಕುದ್ರೆಮುಖದ ಹಾದಿಯಲ್ಲಿ' ಬರಹದಲ್ಲಿ ವ್ಯಕ್ತವಾದ ದಕ್ಷಿಣಕನ್ನಡ ಜಿಲ್ಲೆಯ ಸಾಂಸ್ಕೃತಿಕ ಬದುಕನ್ನು ಪರಿಚಯಿಸಿ.

2) ಕುಡುಗುಂಜಿ ದ್ವೀಪದ ಹಲಸರ ಬದುಕಿನ ದಾರುಣತೆಯನ್ನು ಡಾ.ಹಿ.ಚ.ಬೋರಲಿಂಗಯ್ಯ ಚಿತ್ರಿಸಿದ ಬಗೆ ಹೇಗೆ? ವಿವರಿಸಿ.

ಆ) ಒಂದಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ. **1x5=5**

1) ಮೆಗಾನೆಯ ಕುಣಬಿ ಜನಾಂಗದ ಜೀವನವನ್ನು ವಿವರಿಸಿ.

2) ಕುಪ್ಪಯ್ಯನ ಪಾತ್ರಚಿತ್ರಣವನ್ನು ನೀಡಿರಿ.

IV. ಅ) ಒಂದು ಪ್ರಶ್ನೆಗೆ ಉತ್ತರಿಸಿ. **1x6=6**

1) ವಾಣಿಜ್ಯ ಪ್ರಬಂಧದ ರಚನೆಯ ವಿಧಾನ ಹಾಗೂ ಪ್ರಕಾರಗಳನ್ನು ವಿವರಿಸಿ.

2) ಸಂದರ್ಶನ ಮಾಡುವವರು ಅನುಸರಿಸಬೇಕಾದ ಮಾರ್ಗದರ್ಶಿ ಸೂತ್ರಗಳಾವುವು?

ಆ) ಒಂದರ ಕುರಿತು ಪ್ರಬಂಧ ರಚಿಸಿ. **1x3=3**

1) ಬೀದಿಬದಿಯ ವ್ಯಾಪಾರ

2) ದರಕಡಿತದ ಮಾರಾಟ

V. ಅ) ಎರಡಕ್ಕೆ ಟಿಪ್ಪಣಿ ಬರೆಯಿರಿ. **2x3=6**

1) ಸಂಜಯ

2) ಪು.ತಿ.ನ.

3) ಪೂರ್ಣಚಂದ್ರ ತೇಜಸ್ವಿ

ಆ) ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ. **1x5=5**

1) ಭಾನುನಂದನ ಯಾರು?

2) ಅಲ್ಲಮ ಪ್ರಭುವಿನ ಅಂಕಿತವೇನು?

3) 'ನಾಗಿ' ಕವಿತೆಯನ್ನು ಬರೆದವರು ಯಾರು?

4) ಮಂಕುತಿಮ್ಮನ ಕಗ್ಗ ಬರೆದವರು ಯಾರು?

5) ಪು.ತಿ.ನ. ಇದನ್ನು ವಿಸ್ತರಿಸಿ ಬರೆಯಿರಿ.

******************

KAN 401.3 Reg. No. ..................................

ಕ್ರೆಡಿಟ್ ಆಧಾರಿತ ನಾಲ್ಕನೇ ಸೆಮಿಸ್ಟರ್ ಬಿ.ಕಾಂ. ಪದವಿ ಪರೀಕ್ಷೆ

ಏಪ್ರಿಲ್ 2013

ಕನ್ನಡ ಭಾಷಾ ಪತ್ರಿಕೆ - IV

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

I. ಅ) ಒಂದು ಪದ್ಯದ ಭಾವಾರ್ಥವನ್ನು ವಿವರಿಸಿರಿ. 05

1) ನಿನ್ನ ಮಗಂ ವೃಷಸೇನಂ
ತನ್ನ ಮಗಂ ಸತ್ತನಣ್ಮ ಲಕ್ಷಣನುಂ ನೀ
ನೆನ್ನಂ ಸಂತೈಸುವುದಾಂ
ನಿನ್ನಂ ಸಂತೈಸೆ ಬಂದೆನಂಗಾಧಿಪತೀ

2) ಬಾಳ ಹಳಿವುದದೇಕೆ? ಗೋಳ ಕರೆವುದದೇಕೆ?
ಬಾಳಿದಲ್ಲದೆ ತಪ್ಪದೇನ ಮಾಡಿದೊಡಂ
ಕೇಳಿಯದು ಬೊಮ್ಮನಾಡಿಪನು ನೀನದರೊಳಗೆ
ಪಾಲುಗೊಳಲಳಬೇಡ – ಮಂಕುತಿಮ್ಮ

ಆ) ಎರಡು ಸಾಲುಗಳಿಗೆ ಸಂದರ್ಭ ತಿಳಿಸಿ ವಿವರಿಸಿರಿ. 06

1) ಈಸಕ್ಕಿಯಾಸೆ ನಿಮಗೇಗೆ?

2) ಹುಲುಮನಸಿಯ ಪಾಡು ಹಿಂಗಯ್ತೆ ನಮ್ಮವ್ವ ಮಲೆದೇವ್ರ ಪಾಡ ಏನೇಳ್ಳಿ

3) ಬೈಯಬೇಡ ಅಪ್ಪ ಎನ್ನ ತುಂಗೆಯನ್ನು ಹುಡುಕಿ ತರುವೆ

ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ: 10

1) ಕರ್ಣನ ಶವವನ್ನು ನೋಡಿದ ಕೌರವನಲ್ಲಿ ಉಂಟಾದ ಭಾವನೆಯನ್ನು ರನ್ನ ಕವಿಯು ಹೇಗೆ ವರ್ಣಿಸಿದ್ದಾನೆ?

2) ಕಾಯಕವೇ ಕೈಲಾಸ ತತ್ವವು ವಚನಕಾರರ ವಚನಗಳಲ್ಲಿ ಮೂಡಿಬಂದ ಬಗೆಯನ್ನು ಚರ್ಚಿಸಿ.

ಈ) ಒಂದು ಪ್ರಶ್ನೆಗೆ ಉತ್ತರಿಸಿರಿ. 07

1) 'ಮಂಕುತಿಮ್ಮನ ಕಗ್ಗ'ದ ಮಹತ್ವವನ್ನು ನಿಮಗಿಟ್ಟಿರುವ ಪದ್ಯದ ಹಿನ್ನೆಲೆಯಲ್ಲಿ ವಿವರಿಸಿ.

2) 'ಹಳ್ಳಿಯ ಮುಗ್ಧ ಹೆಣ್ಣು ಸಾವಿಗೀಡಾಗುವ ಪ್ರಸಂಗವನ್ನು 'ನಾಗಿ' ಕವನದ ಹಿನ್ನೆಲೆಯಲ್ಲಿ ವಿವರಿಸಿ.

II. ಅ) ಎರಡು ಪ್ರಶ್ನೆಗಳಲ್ಲಿ ಒಂದಕ್ಕೆ ಉತ್ತರಿಸಿರಿ. 10

1) ಧರ್ಮದ ಸಾಮಾಜಿಕ ಜವಾಬ್ದಾರಿಯನ್ನು ಜಿ.ಎಸ್.ಶಿವರುದ್ರಪ್ಪನವರು ವಿವರಿಸಿದ ಬಗೆ ಹೇಗೆ?

2) 'ಪ್ಯಾರನಿಗೆ ಸೈತಾನ್ ಕಾಟ' ಬರಹದಲ್ಲಿ ಪ್ರಕೃತಿ ಮತ್ತು ಮಾನವ ಸಂಬಂಧಗಳು ಕಂಡುಬಂದ ಬಗೆಯನ್ನು ವಿವರಿಸಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ. 07

1) ಜೀವ–ಜಗತ್ತು–ದೇವರು ಈ ಕುರಿತು ಜಿ.ಎಸ್.ಶಿವರುದ್ರಪ್ಪ ಅವರ ಅಭಿಪ್ರಾಯಗಳೇನು?

2) ಕುಡಿಯುವ ನೀರಿನ ರಕ್ಷಣೆ – ಈ ಕುರಿತು ಪ್ರಬಂಧ ಬರೆಯಿರಿ.

III. ಅ) **ಒಂದು ಪ್ರಶ್ನೆಗೆ ಉತ್ತರಿಸಿರಿ.** **06**

1) ವಾಣಿಜ್ಯ ಲೇಖನವನ್ನು ತಯಾರಿಸುವಾಗ ಕೈಗೊಳ್ಳಬೇಕಾದ ಪೂರ್ವ ತಯಾರಿಯನ್ನು ವಿವರಿಸಿ.
2) ಸಂದರ್ಶನ ಸಂದರ್ಭದಲ್ಲಿ ಸಂದರ್ಶಕನ ಜವಾಬ್ದಾರಿಗಳೇನು?

ಆ) **ಒಂದು ಪ್ರಶ್ನೆಗೆ ಉತ್ತರಿಸಿರಿ.** **03**

1) ವಾಣಿಜ್ಯ ಲೇಖನದ ನಿರೂಪಣೆ
2) ಬೆಲೆಯೇರಿಕೆ ಕುರಿತು ಪುಟ್ಟ ಪ್ರಬಂಧ ರಚಿಸಿ.

IV. ಅ) **ಒಂದು ಪ್ರಶ್ನೆಗೆ ಉತ್ತರಿಸಿರಿ.** **10**

1) ಮೆಗಾನೆಯ ಕುಣಬಿಯವರ ಬದುಕನ್ನು ಲೇಖಕರ ಮಾತುಗಳಲ್ಲಿ ವಿವರಿಸಿ.
2) ಕುಡುಗುಂಜಿ ದ್ವೀಪದ ಹಸಲರ ಬದುಕಿನ ಕಷ್ಟಕಾರ್ಪಣ್ಯಗಳನ್ನು ಚಿತ್ರಿಸಿ.

ಆ) **ಒಂದು ಪ್ರಶ್ನೆಗೆ ಉತ್ತರಿಸಿರಿ.** **05**

1) ಕುದುರೆಮುಖದ ಹಾದಿಯ ಅನುಭವಗಳನ್ನು ಸಂಗ್ರಹಿಸಿ ಬರೆಯಿರಿ.
2) ಸೈಮನ್ ಲೋಬೋನ ವ್ಯಕ್ತಿತ್ವವನ್ನು ತಿಳಿಸಿ.

V. ಅ) **ಎರಡಕ್ಕೆ ಟಿಪ್ಪಣಿ ಬರೆಯಿರಿ.** **06**

1) ಅಭಿಮನ್ಯು
2) ಬಸವಣ್ಣ
3) ಪು.ತಿ.ನ.

ಆ) **ಒಂದು ವಾಕ್ಯದಲ್ಲಿ ಉತ್ತರಿಸಿರಿ.** **05**

1) ದುರ್ಯೋಧನನ ಮಗನ ಹೆಸರೇನು?
2) 'ಕರ್ವಾಲೋ' ಕಾದಂಬರಿ ಬರೆದವರು ಯಾರು?
3) 'ಧರ್ಮ ಎಂದರೆ ಮನುಷ್ಯ ನಿರ್ಮಾಣ' ಎಂದವರು ಯಾರು?
4) ಕರಂಗೋಲು ನೃತ್ಯವನ್ನು ಯಾವ ಕಾಲದಲ್ಲಿ ಪ್ರದರ್ಶಿಸುತ್ತಾರೆ?
5) 'ಮಂಕುತಿಮ್ಮನ ಕಗ್ಗ' ಯಾರ ಕೃತಿ?

********************

KAN 401.3 Reg. No. ................................

ಕ್ರೆಡಿಟ್ ಆಧಾರಿತ ನಾಲ್ಕನೇ ಸೆಮಿಸ್ಟರ್ ಬಿ.ಕಾಂ. ಪದವಿ ಪರೀಕ್ಷೆ

ಏಪ್ರಿಲ್ 2014

ಕನ್ನಡ ಭಾಷಾ ಪತ್ರಿಕೆ – IV

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

I. ಅ) ಒಂದು ಪದ್ಯದ ಭಾವಾರ್ಥವನ್ನು ವಿವರಿಸಿ 05

1) ಹರಿಬೇಡೆ ಕವಚಮಂ ನೀ
ನರಿದಿತ್ತಯ್ ಕೊಂತಿ ಬೇಡೆ ಬೆಗಡೆದೆ ಕೊಟ್ಟಯ್
ಪುರಿಗಣೆಯಂ ನಿನಗೆಣೆ ಕಸ
ವರಗಲಿ ಮೆಯ್ಗಲಿಯುಮಾವನಂಗಾಧಿಪತೀ

2) ಆಸೆಯೆಂಬುದು ಅರಸಂಗಲ್ಲದೆ
ಶಿವಭಕ್ತರಿಗೆ ಉಂಟೆ ಅಯ್ಯಾ?
ರೋಷವೆಂಬುದು ಯಮದೂತರಿಗಲ್ಲದೆ
ಅಜಾತರಿಗುಂಟೆ ಅಯ್ಯಾ?
ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ
ಮಾರಯ್ಯಪ್ರಿಯ ಅಮಲೇಶ್ವರ ಲಿಂಗಕ್ಕೆ ದೂರ ಮಾರಯ್ಯ

ಆ) ಎರಡು ಸಾಲುಗಳಿಗೆ ಸಂದರ್ಭ ತಿಳಿಸಿ ವಿವರಿಸಿ: 06

1) ಹೊಸಯುಕ್ತಿ ಹಳೆತತ್ತ್ವದೊಡಗೂಡೆ ಧರ್ಮ
2) ಎಲ್ಲ ಮರಗಳ ಹಿಂದೆ ತಾಯಿಯ ರೂಪ ಹೊಳೆದಂತಾಯಿತು
3) ಸುಲಬಾನೆ ಲೋಕದ ಸಂಸಾರ ನಡೆಸೋದು

ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ: 10

1) ಮಗ ಲಕ್ಷಣ ಮತ್ತು ಅಭಿಮನ್ಯುವಿನ ಕಳೇಬರವನ್ನು ಕಂಡ ದುರ್ಯೋಧನನ ಪ್ರತಿಕ್ರಿಯೆಯನ್ನು ರನ್ನ ಕವಿ ವರ್ಣಿಸಿದ ಬಗೆಯನ್ನು ವಿವರಿಸಿ.
2) ಡಿ.ವಿ.ಜಿ. ಯವರ 'ಮಂಕುತಿಮ್ಮನ ಕಗ್ಗ'ದ ಮಹತ್ತ್ವವನ್ನು ನಿಮಗಿಟ್ಟಿರುವ ಪದ್ಯಗಳ ಹಿನ್ನೆಲೆಯಲ್ಲಿ ತಿಳಿಸಿ.

ಈ) ಒಂದು ಪ್ರಶ್ನೆಗೆ ಉತ್ತರಿಸಿರಿ: 07

1) ನಾಗಿ ಕವನದಲ್ಲಿ ಮಾನವಪ್ರೀತಿಯ ಕೋಮಲತೆ ಹಾಗೂ ಭೀಕರತೆ ವ್ಯಕ್ತವಾದ ಬಗೆ ಹೇಗೆ?
2) 'ವಿಶ್ವ ಕುಟುಂಬಿಯ ಕಷ್ಟ' ಕವನದ ಸ್ವಾರಸ್ಯವನ್ನು ತಿಳಿಸಿ.

II. ಅ) ಒಂದು ಪ್ರಶ್ನೆಗೆ ಉತ್ತರಿಸಿರಿ: 10

1) ಧರ್ಮದ ಸಾಮಾಜಿಕ ಜವಾಬ್ದಾರಿಯ ಸ್ವರೂಪವನ್ನು ಜಿ.ಎಸ್.ಶಿವರುದ್ರಪ್ಪ ಹೇಗೆ ವಿವರಿಸಿದ್ದಾರೆ?
2) 'ಪ್ಯಾರಾನಿಗೆ ಸೈತಾನ್ ಕಾಟ' ಲೇಖನದಲ್ಲಿನ ತೇಜಸ್ವಿಯವರ ಕಥನ ನಿರೂಪಣೆಯ ಕೌಶಲವನ್ನು ವಿವರಿಸಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ: 07

1) ಧರ್ಮದಲ್ಲಿರುವ ಲಿಂಗಭೇದವನ್ನು ಜಿ.ಎಸ್. ಶಿವರುದ್ರಪ್ಪ ವಿವರಿಸಿರುವ ಬಗೆ ಹೇಗೆ?
2) 'ನೀರಿನ ಮಹತ್ವ' ಪ್ರಬಂಧ ರಚಿಸಿ.

III. ಅ) ಒಂದು ಪ್ರಶ್ನೆಗೆ ಉತ್ತರಿಸಿರಿ: 06

1) ವಾಣಿಜ್ಯ ಲೇಖನದ ಸ್ವರೂಪವನ್ನು ವಿವರಿಸಿ.
2) ಸಂದರ್ಶನದ ಸಂದರ್ಭದಲ್ಲಿ ಸಂದರ್ಶಕರು ವಹಿಸಬೇಕಾದ ಎಚ್ಚರ ಹಾಗೂ ನಡೆಸಬೇಕಾದ ಪೂರ್ವ ತಯಾರಿಯನ್ನು ತಿಳಿಸಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ: 03

1) ವಾಣಿಜ್ಯ ಲೇಖನದ ನಿರೂಪಣೆ.
2) ಜಾಹೀರಾತು ಮತ್ತು ಯುವಜನತೆ–ಈ ಕುರಿತು ಪ್ರಬಂಧ ರಚಿಸಿ.

IV. ಅ) ಒಂದು ಪ್ರಶ್ನೆಗೆ ಉತ್ತರಿಸಿ: 10

1) ಕುಡುಗುಂಜಿ ದ್ವೀಪದ ಜನಜೀವನವನ್ನು ಪರಿಚಯಿಸಿ.
2) ಮೆಗಾನೆಯ ಕುಣಬಿಯವರ ಸಾಂಸ್ಕೃತಿಕ ಬದುಕನ್ನು ಲೇಖಕರು ತೆರೆದಿಟ್ಟ ಬಗೆ ಹೇಗೆ?

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ: 05

1) ಸೈಮನ್ ಲೋಬೋನನ್ನು ಪರಿಚಯಿಸಿ.
2) ಕುಪ್ಪಯ್ಯನ ವ್ಯಕ್ತಿತ್ವವನ್ನು ಚಿತ್ರಿಸಿ.

V. ಅ) ಎರಡಕ್ಕೆ ಟಿಪ್ಪಣಿ ಬರೆಯಿರಿ: 06

1) ದುಶ್ಶಾಸನ
2) ಬಸವಣ್ಣ
3) ಪು.ತಿ.ನ.

ಆ) ಒಂದು ವಾಕ್ಯದಲ್ಲಿ ಉತ್ತರಿಸಿರಿ: 05

1) ಗಾಂಡೀವಿ ಎಂದರೆ ಯಾರು?
2) ದೇವರ ದಾಸಿಮಯ್ಯನ ಅಂಕಿತವೇನು?
3) 'ಚಿದಂಬರ ರಹಸ್ಯ' ಕಾದಂಬರಿ ಬರೆದವರು ಯಾರು?
4) ಧರ್ಮವೆನ್ನುವುದು ಬಹುಜನ ಹಿತಕ್ಕಾಗಿ ಎಂದವರು ಯಾರು?
5) ಕರಂಗೋಲು ಕುಣಿತವನ್ನು ಯಾವ ಕಾಲದಲ್ಲಿ ಪ್ರದರ್ಶಿಸಲಾಗುತ್ತದೆ?

**********

KAN 401.3 Reg. No. ..................................

ಕ್ರೆಡಿಟ್ ಆಧಾರಿತ ನಾಲ್ಕನೆ ಸೆಮಿಸ್ಟರ್ ಬಿ.ಕಾಂ. ಪದವಿ ಪರೀಕ್ಷೆ

ಏಪ್ರಿಲ್ 2015

ಕನ್ನಡ ಭಾಷಾ ಪತ್ರಿಕೆ – IV

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

I. ಅ) ಒಂದು ಪದ್ಯಭಾಗದ ಭಾವಾರ್ಥವನ್ನು ವಿವರಿಸಿ: 05

1) ಅನ್ಯತಂ ಲೋಭಂ ಭಯಮೇಂ
ಬಿನಿತುಂ ನೀನಿರ್ದ ನಾಡೊಳಿರ್ಕುಮೆ ರವಿನಂ
ದನ ನನ್ನಿ ಚಾಗಮಣ್ಮಂ
ಬಿನಿತರ್ಕಂ ನೀನೆ ಮೊದಲಿಗನಾದಯ್॥

2) ವಿಸ್ತಾರದಲಿ ಬಾಳು ವೈಶಾಲ್ಯದಿಂ ಬಾಳು
ಕತ್ತಲೆಯ ಮೊಡಕು ಮೂಲೆಗಳ ಸೇರದಿರು
ಭಾಸ್ಕರನನುಗ್ರಹವೆ ನೂತ್ನ ಜೀವಸತ್ತ್ವ
ಮಾತ್ಕು ನಿನಗಲ್ಪತೆಯೊ – ಮಂಕುತಿಮ್ಮ

ಆ) ಎರಡು ಸಾಲುಗಳನ್ನು ಸಂದರ್ಭದೊಡನೆ ಸ್ವಾರಸ್ಯವನ್ನು ವಿವರಿಸಿ: 06

1) ನಿನ್ನೊರೆಗೆ ದೊರೆಗೆ ಗಂಡರುಮೊಳರೇ
2) ಎಳ್ಳಿಲ್ಲದ ಗಾಣದಲಿ ಎಣ್ಣೆಯುಂಟೇ?
3) ಮಲೆದೇವ್ರ ಪಾಡ ಏನೇಳ್ಳಿ!

ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ: 10

1) ತನ್ನವರ ಶವಗಳನ್ನು ನೋಡುತ್ತಲೆ ಕೌರವನ ಮನಸ್ಸಿನಲ್ಲಿ ಒಡಮೂಡಿದ ಭಾವಗಳೇನು? ವಿವರಿಸಿರಿ.
2) ಹಳ್ಳಿಯ ಮುಗ್ಧ ಹೆಣ್ಣು ಸಾವಿಗೀಡಾಗುವ ಪ್ರಸಂಗವನ್ನು 'ನಾಗಿ' ಕವನದ ಆಧಾರದಲ್ಲಿ ವಿಶ್ಲೇಷಿಸಿ.

ಈ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ: 07

1) ವಚನಕಾರರ ದೃಷ್ಟಿಯಲ್ಲಿ ಕಾಯಕದ ಮಹತ್ವವು ಹೇಗೆ ವಿವರಿಸಲ್ಪಟ್ಟಿದೆ?
2) ವಿಶ್ವಕುಟುಂಬಿಯ ಕಷ್ಟವೇನು?

II. ಅ) ಯಾವುದಾದರೂ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ: 10

1) 'ಧರ್ಮ ಮತ್ತು ಸಾಮಾಜಿಕ ಜವಾಬ್ದಾರಿ' ಕುರಿತ ಜಿ.ಎಸ್.ಶಿವರುದ್ರಪ್ಪನವರ ಚಿಂತನೆಗಳನ್ನು ವಿಶ್ಲೇಷಿಸಿ.
2) ಮನುಷ್ಯನ ನಂಬಿಕೆಗಳು ಮತ್ತು ಮೌಢ್ಯಗಳನ್ನು ತೇಜಸ್ವಿಯವರು 'ಪ್ಯಾರನಿಗೆ ಸೈತಾನ್‌ಕಾಟ' ಎನ್ನುವ ಪ್ರಬಂಧದಲ್ಲಿ ತೆರೆದಿಟ್ಟ ಬಗೆ ಹೇಗೆ ವಿವರಿಸಿ.

ಆ) ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ: 07

1) ನೀರಿನ ಮಹತ್ವವನ್ನು ಕುರಿತು ಪ್ರಬಂಧ ರಚಿಸಿ.
2) ಪ್ಯಾರನನ್ನು ಕಾಡಿದ ಓತಿಕ್ಯಾತನ ಬಗ್ಗೆ ವಿವರಿಸಿ.

III. ಅ) ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ: 06

1) ನುಡಿಚಿತ್ರ ಎಂದರೇನು? ನುಡಿಚಿತ್ರದ ಸ್ವರೂಪವನ್ನು ವಿವರಿಸಿ.

2) ಸಂದರ್ಶನ ಎಂದರೇನು? ಸಂದರ್ಶನ ಮಾಡುವ ವಿಧಾನವನ್ನು ವಿವೇಚಿಸಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ: 03

1) ನುಡಿಚಿತ್ರದ ಭಾಷೆ

2) ಸಂದರ್ಶನದಲ್ಲಿ ಸಂದರ್ಶಕನ ಪಾತ್ರದ ಬಗ್ಗೆ ಬರೆಯಿರಿ.

IV. ಅ) ಯಾವುದಾದರೂ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ: 10

1) ಮೆಗಾನೆ ಹಳ್ಳಿಯ 'ಕುಣಬಿ' ಜನಾಂಗದ ಜೀವನ ಶೈಲಿಯನ್ನು ನಿರೂಪಿಸಿ.

2) ಕುಡುಗುಂಜಿಯ ಹಸಲರ ಸಾಮಾಜಿಕ ಸಾಂಸ್ಕೃತಿಕ ಬದುಕನ್ನು ವಿಷದಪಡಿಸಿ.

ಆ) ಯಾವುದಾದರೂ ಒಂದು ಪ್ರಶ್ನೆಗೆ ಸಂಕ್ಷೇಪವಾಗಿ ಉತ್ತರಿಸಿರಿ: 05

1) ಸೈಮನ್ ಲೋಬೋನನ್ನು ಪರಿಚಯಿಸಿ.

2) ಕುದ್ರೆಮುಖ ಪರ್ವತದ ಸುತ್ತಣದ ಗಿರಿಜನ ಸಮೂಹ.

V. ಅ) ಯಾವುದಾದರೂ ಎರಡಕ್ಕೆ ಟಿಪ್ಪಣಿ ಬರೆಯಿರಿ: 06

1) ದೇವರ ದಾಸಿಮಯ್ಯ

2) ಸಂಜಯ

3) ಕುವೆಂಪು

ಆ) ಎಲ್ಲಾ ಪ್ರಶ್ನೆಗಳಿಗೂ ಒಂದು ವಾಕ್ಯ ಇಲ್ಲವೇ ಒಂದು ಪದದಲ್ಲಿ ಉತ್ತರಿಸಿ: 05

1) ಭಾನು ನಂದನ ಎಂದರೆ ಯಾರು?

2) ಪು.ತಿ.ನ. ಅವರ ಪೂರ್ಣ ಹೆಸರೇನು?

3) 'ಕರ್ವಾಲೋ' ಕಾದಂಬರಿಯ ಕರ್ತೃ ಯಾರು?

4) 'ನುಡಿಚಿತ್ರ' ಇದಕ್ಕೆ ಸಂವಾದಿಯಾದ ಇಂಗ್ಲೀಷ್ ಪದ ಯಾವುದು?

5) ಜಮಾಲಾಬಾದ್ ಬೆಟ್ಟ ಯಾವ ತಾಲೂಕಿನಲ್ಲಿದೆ?

**********